ಒಂದಾಣೆ ಮಾಲೆ 194

ಕಾರುಣ್ಯಮೂರ್ತಿ ಯೇಸು

ಲೇಖಕರು:

ಶ್ರೀ। ಸತ್ಯಾಶ್ರಯ ಕಾಮತ್, ಕಿನ್ನಿಗೋಳಿ.

1958

ಬೆಲೆ: ಒಂದಾಣೆ.

ಒಂದಾಣೆ ಮಾಲೆ, ಮಂಗಳೂರು.

‘ಒಂದಾಣೆ ಮಾಲೆ’ಯಲ್ಲಿ

ನಲ್ವತ್ತಮೂರು ಏಕಾಂಕ ನಾಟಕಗಳು ಪ್ರಕಟವಾಗಿವೆ.

ನೀತಿಪರ ಕಥಾ ಸಂಕಲನಗಳಿವೆ.

ವಿನೋದ ಕಥೆಗಳಿವೆ.

ಊರ ಔಷಧಗಳ ಪುಸ್ತಕಗಳಿವೆ.

ಟಿಶ್ಶ್ಯೂ ಮತ್ತು ಹೊಮಿಯೊಪೆಥಿ ಚಿಕಿತ್ಸಾ ಸಾರ ಇವೆ.

ಸುಭಾಷಿತ, ಗುಮಾನಿ ಕವಿಯ ನೀತಿಶತಕ, ಚಾಣಕ್ಯಶತಕ, ಭರ್ತೃಹರಿಯ ನೀತಿಶತಕ, ಭಕ್ತವಾಣಿ, ವಿವೇಕಾನಂದವಾಣಿ ಮೊದಲಾದುವು ಪ್ರಕಟವಾಗಿವೆ.

ಪ್ರತೀ ವಾರ ಒಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

ಒಂದಾಣೆ ಮಾಲೆ,

ಪ್ರಭಾತ ಆಫೀಸು, ಮಂಗಳೂರು-1.

ಕಾರುಣ್ಯಮೂರ್ತಿ ಯೇಸು

ಜಗತ್ತಿನಲ್ಲಿ ದುಷ್ಟಜನರು ಅಧಿಕವಾಗಿ, 'ಪಾಪಗಳು ಅತಿರೇಕವಾಗಿ, ಶಿಷ್ಟಜನರು ಬದುಕಿ ಬಾಳುವುದು ದುಸ್ತರವೆಂದಾದಾಗ ಪರಮಾತ್ಮನು ವಿಭೂತಿಪುರುಷರ ಅವತಾರವನ್ನು ತಾಳಿ ನಾಶದ ಕಡೆಗೆ ಸಾಗುತ್ತಿರುವ ಜಗತ್ತನ್ನು ಧರ್ಮಸಂಕಟದಿಂದ ರಕ್ಷಿಸುವನು. ಇಂಥ ಸಾವಿರಾರು ದೃಷ್ಟಾಂತಗಳು ನಮಗೆ ಜಗತ್ತಿನ ಇತಿಹಾಸದಲ್ಲಿ ವಿಪುಲವಾಗಿ ಕಾಣಸಿಗುವುವು. ಶ್ರೀ ರಾಮಚಂದ್ರ, ಶ್ರೀ ಕೃಷ್ಣ, ಬುದ್ಧ, ಯೇಸು ಮೊದಲಾದವರೆಲ್ಲ ಈ ವರ್ಗಕ್ಕೆ ಸೇರಿದ ಮಹಾತ್ಮರಾಗಿರುವರು. ಪ್ರತಿಯೊಬ್ಬರು ತಂತಮ್ಮ ದೇಶ, ಕಾಲ, ಸನ್ನಿವೇಶ, ಸಂಸ್ಕೃತಿಗಳಿಗನುಗುಣವಾಗಿ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಧಾರ್ಮಿಕ ಭಾವನೆಗಳನ್ನು ಜನರಲ್ಲಿ ಬಿತ್ತಿ, ಅವರಿಗೆ ಮೋಕ್ಷದ ದಾರಿಯನ್ನು ತೋರಿದರು. "ಮಾನವ ಸಂಸ್ಕೃತಿಯ ತೊಟ್ಟಿಲು" ಎಂದು ಹೆಸರುವಾಸಿಯಾದ ಭಾರತದಲ್ಲಿ ರಾಮ, ಕೃಷ್ಣ ಮೊದಲಾದ ಮಹಾಪುರುಷರ ಜನನವಾದರೆ, ಯೇಸುವಿನ ಜನನವು ನಮ್ಮ ನೆರೆಕರೆಯ ರಾಷ್ಟ್ರವಾದ ಪಾಲೆಸ್ತಿನಿನಲ್ಲಾಯಿತು.

ಯೇಸುವಿನ ಜನನ

ಯೇಸುವು ಯೆಹೂದ್ಯ ಕುಲದವನು. ಈ ಪುರಾತನ ಜನಾಂಗವು ಕುಲಪಿತಾಮಹನಾದ ಅಬ್ರಹಾಮನ ಕಾಲದಿಂದ ಪಾಲೆಸ್ತಿನಿನಲ್ಲಿ ನೆಲಸಿಕೊಂಡಿತ್ತು. ಯೇಸುವು ಹುಟ್ಟುವ ಕಾಲಕ್ಕೆ ಸರಿಯಾಗಿ ಪ್ರಖ್ಯಾತವಾದ ರೋಮನ್ ಚಕ್ರವರ್ತಿಗಳು ಪಾಲೆಸ್ತಿನನ್ನು ಗೆದ್ದುಕೊಂಡು ಅದನ್ನು ತಮ್ಮ ಚಕ್ರಾಧಿಪತ್ಯಕ್ಕೆ ಸೇರಿಸಿದ್ದರು. ನೂರಾರು ವರ್ಷಗಳಿಂದ ಪರಕೀಯರ ದಾಸ್ಯದಲ್ಲಿದ್ದ ಯೆಹೂದ್ಯರು ತಮ್ಮನ್ನು ಬಂಧವಿಮೋಚನೆಗೊಳಿಸುವ ನಾಯಕನೊಬ್ಬನ ದಾರಿಯನ್ನು ಮುಂಗಾಣುತಿದ್ದರು. ಆದರೆ ಕಾಪಟ್ಯ ವಿಷಯ ಸುಖ, ಈರ್ಷೆಗಳಿಗೆ ಬಲಿಯಾಗಿದ್ದ ಅವರು ತಮ್ಮ ಹೃದಯ ನೈರ್ಮಲ್ಯದ ಕಡೆಗೆ ಗಮನವೀಯುತ್ತಿರಲಿಲ್ಲ. ಅವರು ಶ್ರೀಮಂತಿಕೆ, ಐಹಿಕ ಸುಖ ಭೋಗಗಳ ಕಡೆಗೆನೇ ತಮ್ಮ ದೂರದೃಷ್ಟಿಯನ್ನಿಟ್ಟುಕೊಂಡಿದ್ದರು.

ಯೇಸುವೇನೋ ಹುಟ್ಟಿದನು. ಆದರೆ ಅವನ ಕಡೆಯವರೇ ಅವನನ್ನು ಗುರುತಿಸಲಾರದಾದರು. ತಮ್ಮ ಧುರೀಣನು ರಾಜಕುಮಾರನಾಗಿ ಹುಟ್ಟಿ

ಲಿರುವನೆಂದು ಬಗೆದಿದ್ದ ಯೆಹೂದ್ಯರ ಬಯಕೆಯು ಈಡೇರಲಿಲ್ಲ. ಯೇಸುವಿನ ತಾತನು ಯೋಸೆಫನೆಂಬ ನಜರೇತಿನ ಬಡಗಿಯು. ತಾಯಿಯು ಮರಿಯಳೆಂಬ ಓರ್ವ ದಲಿತ ಕನ್ಯೆಯು. ಇಳಿವಯಸ್ಸಿನಲ್ಲಿ ವಿವಾಹವಾಗಿದ್ದ ಅವರು ಒಮ್ಮೆ ಬೆತ್ಲಹೆಮ್ ನಗರಕ್ಕೆ ಜಾತ್ರೆಗೆ ಹೋಗಿದ್ದಾಗ, ತುಂಬಿದ ಬಸಿರಿಯಾಗಿದ್ದ ಮರಿಯಳು ಊರ ಹೊರಗಿನ ಗೋದಲಿಯೊಂದರಲ್ಲಿ ಯೇಸುವಿಗೆ ಜನ್ಮವಿತ್ತಳು.

ಬಾಲಕನು ಬಳೆದು ತರುಣನಾದುದು

ಬಾಲಕನಾದ ಯೇಸುವು ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ಪ್ರವರ್ಧಿಸತೊಡಗಿದನು. ಬಡವ ಬಲ್ಲಿದರೆನ್ನದೆ ಸರ್ವರಿಗೂ ಹಿತವಾಗಿ ವರ್ತಿಸುತಿದ್ದ ಅವನು ಸರ್ವರ ಕಣ್ಣಿನ ಗೊಂಬೆಯಾಗಿ ಪರಿಣಮಿಸಿದ್ದನು. ನಜರೇತಿನ ಆಬಾಲವೃದ್ಧರೆಲ್ಲರ ಪ್ರೇಮದ ಪುತ್ಥಳಿಯಾಗಿದ್ದನು. ಹೆತ್ತ ತಾಯಿಯಂದಿರ ಹೊಟ್ಟೆಯ ಕರುಳಾಗಿದ್ದನು. ಕಂದರ ಕೊಳಲಾಗಿದ್ದನು. ಜನರೆಲ್ಲರ ಕರ್ಣಗಳ ಕರ್ಣಪೂರವಾಗಿದ್ದನು. ಈ ರೀತಿ ಸರ್ವರ ಮನಸ್ಸನ್ನು ಸೂರೆಗೊಂಡಿದ್ದ ಯೇಸು ಬಾಲಕನು ತನ್ನ ಬಾಲಕ್ರೀಡೆ, ಮುದ್ದು ಮಾತುಗಳಿಂದ, ಮಂದಾರ ವೃಕ್ಷವು ಬೆಳೆಯುವ ತೆರದಲ್ಲಿ ಬಳೆಯತೊಡಗಿದನು.

ಯೇಸುವಿಗೆ ಹದಿನೆರಡನೇ ವರ್ಷ ಪ್ರಾಯ; ಸುಳಿಗುರುಳಿನ ಕೆಂಗೂದಲು ತಲೆಯ ಮೇಲೆಲ್ಲಾ ದಟ್ಟನೆ ತುಂಬಿಕೊಂಡಿತ್ತು. ಚೆಲುವಿನ ಚೆಂದುಟಿ, ಮಾಟದ ಗದ್ದ, ತುಂಬಿದ ಕೆನ್ನೆಗಳು ಅವನ ಸೌಂದರ್ಯವನ್ನು ಹೊರಸೂಸುತ್ತಿದ್ದವು. ವಿಶ್ವವನ್ನೇ ಒಳಗೊಂಡಂತಿರುವ ಅವನ ತೇಜಃಪುಂಜವಾದ ನಯನದ್ವಯಗಳ ಕಣ್ಗೊನೆಯ ಕಣ್ಗದಿರಿನಿಂದ ದಿವ್ಯ ವ್ಯಕ್ತಿತ್ವವು ಹೊರಹೊಮ್ಮುತಿತ್ತು. ಅಹಿಂಸೆ, ಕರುಣೆ, ಬಂಧುಪ್ರೇಮ, ಸೌಜನ್ಯ, ಸರಳತೆಗಳ ಸಾಕಾರ ಸ್ವರೂಪನಾಗಿದ್ದ ಅವನನ್ನು ಕಂಡವರೆಲ್ಲರೂ ನೋಡಿ ನೋಡಿ ಕಣ್ತಣಿಯದವರಾಗಿದ್ದರು. ಊರಜನರ ದೃಷ್ಟಿಯಲ್ಲೇ ಹೀಗಾಗಿ ಪರಿಣಮಿಸಿದ್ದ ಯೇಸುವು ಅವನ ಮಾತಾಪಿತರಿಗೆ ಎಷ್ಟು ಅಚ್ಚುಮೆಚ್ಚಿನವನಿದ್ದನೆಂದು ನಮಗೆ ವ್ಯಕ್ತವಾಗುವುದು.

ಪಾಲಿಸ್ತಿನಿನ ರಾಜಧಾನಿಯಾದ ಯೆರುಸಲೇಂ ನಗರದಲ್ಲಿ ಪ್ರತಿವರ್ಷವೂ ಯೆಹೂದ್ಯರ ರಾಷ್ಟ್ರೀಯ ಹಬ್ಬವು ಜರಗುತಿತ್ತು. ಅದಕ್ಕೆ ಊರ ಪರವೂರಿನ ಯೆಹೂದ್ಯರೆಲ್ಲಾ ಬಂದು ನೆರೆಯುತಿದ್ದರು. ಯೋಸೆಫ, ಮರಿ

ಯೆರುಸಲೇಮಿಗೆ ಪ್ರಯಾಣ ಬೆಳೆಸುವಾಗ ತಮ್ಮ ಏಕಮಾತ್ರ ಕುಮಾರ ನಾಗಿದ್ದ ಯೇಸುವನ್ನೂ ಜತೆಯಲ್ಲಿ ಕರಕೊಂಡು ಹೋದರು. ಅಲ್ಲಿನ ಯೆಹೂದ್ಯ ದೇವಾಲಯದಲ್ಲಿ ತಮ್ಮ ಪೂಜಾವಿಧಿಯನ್ನು ತೀರಿಸಿದ ಬಳಿಕ ತಮ್ಮ ಹುಟ್ಟೂರಾದ ನಜರೇತಿಗೆ ಅವರು ಹಿಂದಿರುಗಿದರು. ದಾರಿಯಲ್ಲಿ ಯೇಸುವನ್ನು ಕಾಣದೆ ಕಂಗಾಲಾಗಿ ಮೂರು ದಿನ ಮೂರು ರಾತ್ರಿಗಳ ವರೆಗೆ ಅನ್ನ ನೀರನ್ನು ಮುಟ್ಟದೆ ಅವನನ್ನು ಹುಡುಕಲಾರಂಭಿಸಿದರು. ದಣಿದು, ಕೊನೆಯದಾಗಿ ದೇವಾಲಯವನ್ನು ಪ್ರವೇಶಿಸಿ ನೋಡುವಲ್ಲಿ, ಯೇಸುವು ವಿದ್ವಾಂಸರ ಮತ್ತು ನ್ಯಾಯ ಶಾಸ್ತ್ರಜ್ಞರ ನಡುವೆ ಕುಳಿತು ಅವರೊಡನೆ ತಾತ್ವಿಕ, ವಾದ-ವಿವಾದದಲ್ಲಿ ಮಗ್ನನಾಗಿದ್ದುದು ಅವರಿಗೆ ಕಂಡು ಬಂತು. ಆಗ ಯೇಸುವಿಗೆ ಹದಿನೆರಡನೇ ವಯಸ್ಸು.

ಯರು ಕೂಡಾ ಪ್ರತಿ ವರ್ಷವೂ ಈ ಹಬ್ಬಕ್ಕೆ ಹಾಜರಿರುವ ಸಂಪ್ರದಾಯ ವನ್ನು ಇಟ್ಟುಕೊಂಡಿದ್ದರು. ಆ ವರ್ಷ ಯೋಸೆಫ, ಮರಿಯರು ತಾವು

ಅಂದಿನಿಂದ ೧೮ ವರ್ಷಗಳ ವರೆಗಿನ ಯೇಸುವಿನ ಜೀವನ ಚರಿತ್ರೆಯು ಗುಪ್ತವಾಗಿದೆ. ಕ್ರೈಸ್ತರ ಧರ್ಮಗ್ರಂಥವಾದ ಬೈಬಲಿನಲ್ಲಿ ಯೇಸುವಿನ ಗುಪ್ತ ಜೀವನದ ಕುರಿತು "ಅವನು ಅಂದಿನಿಂದ ತನ್ನ ಮಾತಾಪಿತರಿಗೆ ವಿಧೇಯ ನಾಗಿದ್ದು ಅವರ ನಿತ್ಯಕರ್ಮಗಳಲ್ಲಿ ಅವರಿಗೆ ಸಹಕರಿಸಿ ನಡೆಯುತಿದ್ದ"ನೆಂದು ಮಾತ್ರ ವರ್ಣಿತವಾಗಿದೆ. ತದನಂತರ ಬರುವುದೆಂದರೆ ಯೇಸುವಿನ ೩೦ನೇ ವಯಸ್ಸಿನಂದಿನ ಮತಪ್ರಚಾರ ಜೀವನ. ಬೈಬಲನ್ನು, ಯೇಸುವು ಮರಣ ಹೊಂದಿದ ಇಪ್ಪತ್ತು, ಇಪ್ಪತ್ತೈದು ವರ್ಷಗಳ ಅನಂತರ ಅವನ ಶಿಷ್ಯರು ಬರೆದಿದ್ದಾರೆ. ತನ್ನ ಮೂವತ್ತು ವರ್ಷಗಳ ಜೀವನಾವಧಿಯನ್ನೇ ಟಿಬೇಟ್, ಅಫಘಾನಿಸ್ತಾನಗಳಲ್ಲಿ ಸಂಶೋಧನೆಗಾಗಿ ಧಾರೆಯೆರೆದ ಪ್ರಖ್ಯಾತ ಪೌರ್ವಾತ್ಯ ಪಂಡಿತ ಪ್ರೋ। ಲುಟೊರಿಚ್ಚನು ವಿರಚಿಸಿದ ಗ್ರಂಥವಾದ "ಯೇಸುವಿನ ಗುಪ್ತ ಜೀವನ" (The Hidden Life of Jesus) ಎಂಬುದರಲ್ಲಿ— "ಯೇಸುವು ಭಾರತದ ತಕ್ಷಶಿಲಾ ವಿಶ್ವವಿದ್ಯಾನಿಲಯಕ್ಕೆ ಬಂದಿದ್ದು, ಅಲ್ಲಿ ಅಶ್ವಘೋಷನೆಂಬ ಸುಪ್ರಸಿದ್ಧ ತತ್ವವೇತ್ತನ ಕೈಕೆಳಗೆ ಅಭ್ಯರ್ಥಿಯಾಗಿದ್ದನೆಂಬುದಕ್ಕೆ ಉಪಲಬ್ಧವಾದ ಶಿಲ್ಪಾವಶೇಷಗಳೇ ಕಾರಣಗಳು" ಎಂದಿದ್ದಾನೆ. ಲೆಬೆನಾನಿನ ಲೋಕವಿಖ್ಯಾತ ಕವಿ ಖಲೀಲ್ ಜಿಬ್ರಾನನು ಬರೆದ "ಮಾನವ ಪುತ್ರ ಯೇಸು"ವೆಂಬ ಪುಸ್ತಕದಲ್ಲಿ ಯೇಸುವಿನ ಶಿಷ್ಯೋತ್ತಮನಾದ ಯೋ

ಹಾನನು ಯೇಸುವಿನ ಕುರಿತಾಗಿ "ಭಾರತದ ಗಿರಿತಟಾಕಗಳಲ್ಲಿ ನೀವವನ ಧ್ವನಿಯನ್ನು ಕೇಳಲಿಲ್ಲವೆ?" ಎನ್ನುತ್ತಾನೆ.

ಯೇಸುವಿನ ಪ್ರಚಾರ ಜೀವನ

ಮಹಾತ್ಮಾ ಯೇಸುವು ತನ್ನ ಮೂವತ್ತನೆಯ ವಯಸ್ಸಿನಲ್ಲಿ ಮತ ಪ್ರಚಾರಕ್ಕಿಳಿದನು. ಅವನು ಕೇವಲ ಮೂರು ವರ್ಷಗಳ ವರೆಗೆ ಮಾತ್ರಮತ ಪ್ರಚಾರವನ್ನು ಮಾಡಿದರೂ, ಈ ಸಂಕ್ಷೇಪಾವಧಿಯಲ್ಲಿ ಸಹಸ್ರಾರು ಜನರ ಹೃದಯಗಳನ್ನು ಸೂರೆಗೈದನು. ಅವನ ಮೂರು ವರ್ಷಗಳ ಪ್ರಚಾರ ಜೀವನವು ಶಾಂತಿ, ಅಹಿಂಸೆ, ನಿರ್ಭೀತತೆಗಳ ಒಂದು ಬೃಹದಧ್ಯಾಯವೇ ಆಗಿತ್ತು. ಸತ್ಯದ ಕುಲುಮೆಯಾಗಿತ್ತು. ಬಂಧುಪ್ರೇಮ, ದಯೆ, ದಮ, ದಾನಗಳ ನಿರಂತರ ಪ್ರವಾಹದ ಕಾರಂಜಿಯಾಗಿತ್ತು. ಶೀಲ, ಸೌಜನ್ಯಗಳ ಮಧುರ ಮಿಲನವಾಗಿತ್ತು. ಯೇಸುವು ಈ ಮೂರೇ ವರ್ಷಗಳೊಳಗೆ ಪಾಲೆಸ್ತಿನಿನ ಜನರಿಗೆ ಆತ್ಮೀಯನಾಗಿ, ಸರ್ವರಿಗೆ ಸರ್ವಸ್ವವಾಗಿ ಪರಿಣಮಿಸಿದ್ದ.

ಮಹಾತ್ಮ ಯೇಸುವಿನ ಹೃದಯವು ದಲಿತರನ್ನು, ನಿರ್ಗತಿಕರನ್ನು ಮತ್ತು ಪತಿತೆಯರನ್ನು ಕಂಡೊಡನೆ ಅವರಿಗಾಗಿ ತುಂಬಾ ಮಿಡಿಯುತಿತ್ತು. ಅವರ ಕಷ್ಟಗಳನ್ನು ಕಂಡು ಅವನ ಮನ ಮರುಗುತಿತ್ತು. ಈರ್ಷೆ, ಕ್ಲೈಬ್ಯ, ಕಾಪಟ್ಯಗಳಿಂದ ಕೂಡಿದ ಶ್ರೀಮಂತರನ್ನು ಕಂಡೊಡನೆ ಅವನು ಕನಿಕರ ಪಡುತಿದ್ದನು. ಜನವಂಚಕರಾದ ಅವರನ್ನು ಕಂಡೊಡನೆ ಬಿರುಮೊಯ್ಲಿನಂಥ ಬಿರುಸು ನುಡಿಗಳು ಪ್ರಭಾಕರನ ಪ್ರಖರ ಕಿರಣಗಳಂತೆ ಅವನ ಆಸ್ಯಾಬ್ಜದಿಂದ ಹೊರಹೊರಟು ಅವರ ಹೃದಯವನ್ನು ಚುಚ್ಚುತಿದ್ದುವು. ಅನಾಥರಿಗೆ ಬಂಧುವಾಗಿ, ಪಾಪಿಗಳಿಗೆ ಕರುಣಾಕರನಾಗಿ, ಪತಿತೆಯರಿಗೆ ಹಿಮಕರನಾಗಿ, ಶರಣಾರ್ಥಿಗಳಿಗೆ ಕಲ್ಪತರುವಾಗಿ ಪರಿಣಮಿಸಿದ್ದನು. ಅವನ ವಿಷಯದಲ್ಲಿ, ಹಿಂದೆ ಪ್ರವಾದಿಯಾಗಿದ್ದ ಸಿಮೆಯೋನನು ನುಡಿದ "ಈ ಮಗುವು ಯೆಹೂದ್ಯರಲ್ಲಿ ಹಲವಾರು ಜನರ ಅಧಃಪತನಕ್ಕೂ ಹಲವು ಜನರ ಉತ್ಥಾನಕ್ಕೂ ಕಾರಣವಾಗುವುದು" ಎಂಬ ಅಮೃತಸದೃಶ ಮಾತುಗಳು ಅಕ್ಷರಶಃ ಸತ್ಯವಾಗಿ ಪರಿಣಮಿಸಿದ್ದುವು.

ಯೇಸುವು ಶಿಷ್ಯರನ್ನು ಆರಿಸಿದ್ದು

ಧಾರ್ಮಿಕ ಗುರುವಾಗಿದ್ದವನು ತನ್ನ ಕಾರ್ಯಗಳು ಸುಸಾಂಗವಾಗಿ ನೆರವೇರುವಂತೆ ಯೋಗ್ಯವಾದ ಶಿಷ್ಯಗಣವನ್ನು ಆರಿಸಿ, ಅವರನ್ನು ತರಬೇತು

ಗೊಳಿಸುವನು. ಇದು ಪ್ರತಿ ದೇಶದಲ್ಲೂ ನಡೆದುಬಂದ ಸಂಪ್ರದಾಯ. ನಮ್ಮ ಭಾರತದಲ್ಲೂ ಇದೇ ರೀತಿ ಋಷಿ ಮುನಿಗಳು ತಮ್ಮ ಶಿಷ್ಯರನ್ನು ಆರಿಸುತಿದ್ದರು. ಹೀಗೆ ಕಣ್ವ, ಭೃಗು, ಭಾರದ್ವಾಜ ಋಷಿವರ್ಯರಿಗಲ್ಲದೆ, ಅರ್ವಾಚೀನದಲ್ಲಿ ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯರಿಗೆ ಅವರದೇ ಆದ ಶಿಷ್ಯಸಮೂಹವಿತ್ತು.

ಅವತಾರಪುರುಷನಾಗಿ ಹುಟ್ಟಿದ್ದ ಯೇಸುವಿಗೆ ತನ್ನ ಮತಕಾರ್ಯಗಳನ್ನು ಮುಂದುವರಿಸಲು ಸಮರ್ಥರಾದ ಶಿಷ್ಯರ ಅವಶ್ಯಕತೆಯಿತ್ತು. ಅವನ ಮೊತ್ತಮೊದಲನೆಯ ಇಬ್ಬರು ಶಿಷ್ಯರು ಯೋಹಾನ ಮತ್ತು ಅಂದ್ರೇಯರು. ಅಂದ್ರೇಯನು ತನ್ನ ಅಣ್ಣನಾದ ಸಿಮೋನನನ್ನು ಯೇಸುವಿಗೆ ಪರಿಚಯ ಮಾಡಿಕೊಟ್ಟನು. ಈ ಘಟನೆಯು ನಡೆದ ಮಾರನೆ ದಿನ ಯೇಸುವು ಗಲಿಲೇಯಕ್ಕೆ ಪ್ರಯಾಣ ಬೆಳಸುತಿದ್ದಾಗ ದಾರಿಯಲ್ಲಿ ಫಿಲಿಪನೆಂಬೊಬ್ಬನನ್ನು ಕಂಡು, "ಬಾ, ನನ್ನ ಶಿಷ್ಯನಾಗು" ಎಂದನು. ಫಿಲಿಪನು ತನ್ನ ಸರ್ವಸ್ವವನ್ನೂ ಬಿಟ್ಟು ಯೇಸುವನ್ನು ಹಿಂಬಾಲಿಸಿದನು. ಫಿಲಿಪನು ನತಾನಿಯಲ್‌ಯೆಂಬ ತನ್ನ ಸ್ನೇಹಿತನನ್ನು ಯೇಸುವಿನ ಶಿಷ್ಯವರ್ಗಕ್ಕೆ ಸೇರಿಸಿದನು.

ಒಮ್ಮೆ ಯೇಸುವು ನೆರೆದ ಭಕ್ತಜನರಿಗೆ ಧರ್ಮಬೋಧೆಯನ್ನು ಮಾಡುತಿದ್ದನು. ಜನಸ್ತೋಮವು ಎಂದಿಗಿಂತಲೂ ಅಧಿಕವಾಗಿ ಕಿಕ್ಕಿರಿದುಕೊಂಡಿತ್ತು. ಅನ್ನ ನೀರಿಲ್ಲದೆ ತನ್ನನ್ನು ಹಿಂಬಾಲಿಸುತ್ತಿದ್ದ ಜನಜಂಗುಳಿಯನ್ನು ಕಂಡು ಯೇಸುವು ಮಮ್ಮಲ ಮರುಗಿದನು. ಅವನ ಹೃದಯದಿಂದ ಕರುಣಾರಸದ ಒರತೆಯು ಹೊನಲಾಗಿ ಹರಿಯಿತು. ಕುರುಬನಿಲ್ಲದ ಕುರಿಗಳಂತಿದ್ದ ಭಕ್ತವೃಂದವನ್ನು ಕಂಡು ಮನನೊಂದ ಯೇಸುವು ಇನ್ನು ಮುಂದೆ ದೇಶದ ಕೆಲವೆಡೆಗಳಿಗೆ ತನ್ನ ಶಿಷ್ಯರನ್ನು ಮತಬೋಧನೆಗಾಗಿ ಕಳುಹಿಸುವ ಏರ್ಪಾಡುಮಾಡಿದನು. ಅಂದಿನ ರಾತ್ರಿಯನ್ನಿಡೀ ಪ್ರಾರ್ಥನೆಯಲ್ಲಿ ಕಳೆದು, ಮಾರನೇ ದಿನ ಬೆಳ್ಳಿ ಮೂಡುವಾಗ ತನ್ನ ಶಿಷ್ಯರನ್ನೆಲ್ಲಾ ಬಳಿಗೆ ಕರೆದು, ಅವರಲ್ಲಿ ಯೋಗ್ಯರಾದ ೧೨ ಜನರನ್ನು ಆರಿಸಿ ತೆಗೆದನು. ಅವರು ಈ ಕೆಳಗಿನವರಾಗಿದ್ದರು: ಸಿಮೋನನೆಂಬ ಪೇತ್ರನು; ಅವನ ತಮ್ಮನಾದ ಅಂದ್ರೇಯನು; ಜೆಬೆದಿಯ ಮಕ್ಕಳಾದ ಜೇಮ್ಸ್ ಮತ್ತು ಯೋಹಾನರು; ಫಿಲಿಪ್ ಮತ್ತು ಬಾರ್ತಲೋಮಿ (ನತಾನಿಯಲ್); ಥೋಮಸ್ ಮತ್ತು ಮ್ಯಾಥ್ಯೂ; ಅಲ್ಫೇಯುಸನ ಮಗನಾದ ಜೇಮ್ಸನು; ತದ್ದೇಯುಸನು; ಶ್ರದ್ಧಾ

ವಂತನೆಂದೆನ್ನಿಸಿಕೊಂಡ ಸಿಮೋನನು; ಇಸ್ಕಾರಿಯೊತ್ ಜೂದನು. ಈ ರೀತಿ ತನ್ನ ಪ್ರೀತಿಗೆ ಪಾತ್ರರಾದ ೧೨ ಜನ ಶಿಷ್ಯರನ್ನು ಆರಿಸಿ, ಯೇಸುವು ಅವರನ್ನು ಮತಪ್ರಚಾರಕ್ಕಾಗಿ ಯೆಹೂದ್ಯರ ನಡುವೆ ಕಳುಹಿಸಿಕೊಟ್ಟನು. ಆದರೆ ಹೋಗುವಾಗ ಮತಪ್ರಚಾರಕರಾದ ಅವರು ಯಾವ ವಸ್ತು ಒಡವೆಗಳನ್ನೂ ಒಯ್ಯಕೂಡದಾಗಿ ಕಟ್ಟಪ್ಪಣೆಯನ್ನಿತ್ತನು.

o o o o o

"ಯೇಸುವು ಹೇಳಿದ್ದೆಲ್ಲ ನನ್ನ ಮನಸ್ಸಿಗೆ ತಿಳಿಯುತಿದ್ದಿಲ್ಲ. ಆದರೆ ಆ ಧ್ವನಿ ಮಾತ್ರ ನನ್ನ ಕಿವಿಗಳಿಗೆ ಅರ್ಥವಾಗುತಿತ್ತು." —ಪಾಲೆಸ್ತಿನಿನ ಮೊಚ್ಚಗಾರ.

ಒಮ್ಮೆ ಯೇಸುವನ್ನು ಅನುಸರಿಸುತ್ತಿರುವ ಹಿಂಬಾಲಕರು ಅಧಿಕವಾಗಲು, ಅವನು ಅಲ್ಲೇ ಹತ್ತಿರದಲ್ಲಿದ್ದ ಗುಡ್ಡದ ತಲೆಯಲ್ಲಿ ಕುಳಿತುಕೊಂಡನು. ಜನರೆಲ್ಲರೂ ಗುಡ್ಡದ ಸುತ್ತುಮುತ್ತಲು ಅಣಿ ನೆರೆದರು. ಯೇಸು ಅವರಿಗೆ ಮೋಕ್ಷದ ದಾರಿಯು ಕುರಿತು ಬೋಧಿಸತೊಡಗಿದನು.

"ಮೋಕ್ಷವನ್ನು ಅಪೇಕ್ಷಿಸುವವರು ಈ ಎಂಟು ವಿಷಯಗಳಲ್ಲಿ ಸದ್ಗುಣಭರಿತರಾಗಬೇಕು" ಎಂದನವನು.

"ಮನಸ್ಸಿನಲ್ಲಿ ಬಡವರಾಗಿರುವವರು ಧನ್ಯರು; ಸ್ವರ್ಗಲೋಕವು ಅವರದಾಗಿದೆ.

"ವಿನಯಶೀಲರು ಧನ್ಯರು; ವಸುಂಧರೆಯು ಅವರಿಗೆ ಒಲಿಯುವಳು.

"ಪರರ ಕಷ್ಟಗಳಲ್ಲಿ ಸಮಭಾಗಿಗಳಾಗುವವರು ಧನ್ಯರು; ಅವರ ಕಷ್ಟಗಳಲ್ಲಿ ಅವರಿಗೆ ಸಹಾನುಭೂತಿಯು ದೊರಕುವುದು.

"ನೀತಿಗಾಗಿ ಅನ್ನನೀರಿಲ್ಲದೆ ತೊಳಲಾಡುವವರು ಧನ್ಯರು; ಅವರಿಗೆ ಮೃಷ್ಟಾನ್ನ ಭೋಜನವು ದೊರಕುವುದು.

"ಕರುಣಾಮೂರ್ತಿಗಳು ಧನ್ಯರು; ಅವರಿಗೆ ಕರುಣೆಯು ದೊರಕುವುದು.

"ಹೃದಯನೈರ್ಮಲ್ಯವುಳ್ಳವರು ಧನ್ಯರು; ಅವರು ಪರಮಾತ್ಮನ ಸಾಕಾರ ದರ್ಶನವನ್ನು ಪಡೆಯುವರು.

"ಶಾಂತಿದೂತರು ಧನ್ಯರು; ಅವರನ್ನು ಪರಮಾತ್ಮನ ಸತ್ಪುತ್ರರೆಂದು ಕರೆಯುವರು.

"ನನಗಾಗಿ ದುಃಖದುಮ್ಮಾನಗಳನ್ನನುಭವಿಸುವವರು ಧನ್ಯರು; ಮೋಕ್ಷವೆಂಬ ಶ್ರೇಷ್ಠ ಬಹುಮಾನವು ಅವರದಾಗುವುದು"

ಅನಂತರ ತನ್ನ ಶಿಷ್ಯರ ಕಡೆಗೆ ತಿರುಗಿ ಅವನು ಹೀಗೆಂದನು: "ನೀವು ಭೂಮಿಯ ಲವಣವಾಗಿದ್ದೀರಿ, ಲವಣವೇ ತನ್ನ ಗುಣವನ್ನೇ ಕಳಕೊಂಡಲ್ಲಿ ಅದನ್ನು ಮತ್ತೆಲ್ಲಿಂದ ಪೂರೈಸಲಾದೀತು.

"ನೀವು ಜಗತ್ತಿನ ಜ್ಯೋತಿಯಾಗಿದ್ದೀರಿ, ಜನರು ಬತ್ತಿಯನ್ನು ಹೊತ್ತಿಸುವುದು ಅದರಿಂದ ಪ್ರಕಾಶವನ್ನು ಪಡೆಯುವುದಕ್ಕಾಗಿ ಹೊರತು ಬಚ್ಚಿಡಲಿಕ್ಕಲ್ಲ. ನಿಮ್ಮ ಅಂತಜ್ಯೋತಿಯು ಎಂದೆಂದಿಗೂ ನಂದಾದೀಪವಾಗಿ ಬೆಳಗಿ ಸರ್ವರ ಪಥಪ್ರದರ್ಶನಕ್ಕೆ ನೆರವಾಗಲಿ."

ಜನರಿಂದ ಹೆಗ್ಗಳಿಕೆಯನ್ನು ಬಯಸುವವರನ್ನು ಎಚ್ಚರಿಸುತ್ತಾ ಯೇಸುವು ಹೀಗೆಂದನು: "ಸತ್ಕರ್ಮಗಳನ್ನು ಮಾಡುವವರು ಇತರರ ಹೊಗಳಿಕೆಗೆ ಬಲಿಯಾಗದಂತೆ ಜಾಗರೂಕರಾಗಿರಿ, ಭಟ್ಟಂಗಿಯರ ಹೊಗಳಿಕೆಗೆ ಬಾಯಿಬಿಡುವವನು ಎಂದೆಂದಿಗೂ ಮೋಕ್ಷವೆಂಬ ಅಮೂಲ್ಯ ಬಹುಮಾನವನ್ನು ಪಡೆಯಲಾರನು. ನಿಮ್ಮ ಕರ್ತವ್ಯಗಳನ್ನು ನೆರವೇರಿಸುವಾಗ ಫಲಾಪೇಕ್ಷೆಯನ್ನು ಇಟ್ಟುಕೊಳ್ಳಬೇಡಿರಿ. ದಾನಧರ್ಮಗಳನ್ನು ಮಾಡುವಾಗ ನಿಮ್ಮ ಬಲಗೈಯಿಂದ ಇತ್ತದ್ದು ಎಡಗೈಗೆ ತಿಳಿಯದಂತೆ ವರ್ತಿಸಿರಿ, ಇಲ್ಲದಿದ್ದಲ್ಲಿ ನಿಮ್ಮ ನಡತೆಯು ಫರಿಜಾಯರಿಗಿಂತಲೂ ಕೀಳುಮಟ್ಟದಾಗಿ ಪರಿಣಮಿಸುವುದು."

ಸರ್ವೇಶ್ವರನಲ್ಲಿ ಸರ್ವರೂ ಶ್ರದ್ಧಾವಂತರಾಗಿ ವರ್ತಿಸಬೇಕೆಂಬ ಕುರಿತು ಯೇಸುವೆಂದನು: "ಜೀವನಯಾತ್ರೆಯನ್ನು ಸಾಗಿಸಲು ಬಂದಿರುವ ನೀವು ಇಹಲೋಕದಲ್ಲಿ ದ್ರವ್ಯರಾಶಿಯನ್ನು ಕೂಡಹಾಕಿ ನೆಲದೊಳಗೆ ಹುಗಿದಿಡಬೇಕೆಂದು ಬಯಸಬೇಡಿರಿ. ಇಲ್ಲಿ ನೀವು ಕೂಡಿಟ್ಟ ದ್ರವ್ಯಕ್ಕೆ ತುಕ್ಕು ಮತ್ತು ಗೆದ್ದಲು ಹಿಡಿಯುವುದು. ಆದರೆ, ಪರಲೋಕದಲ್ಲಿ ಕೂಡಹಾಕಿರುವ ದ್ರವ್ಯಕ್ಕೆ ಇವೆರಡೂ ಹತ್ತಲಾರದೆ ಸುರಕ್ಷಿತವಾಗಿ ಉಳಿಯುವುದು.

"ನಿಮ್ಮ ಐಶ್ವರ್ಯವಿರುವಲ್ಲಿ ನಿಮ್ಮ ಹೃದಯವೂ ನೆಲಸುವುದು. ಯಾರೊಬ್ಬನಿಂದಲೂ ಇಬ್ಬರು ಒಡೆಯರನ್ನು ಒಲಿಸಲಾಗದು. ನಿಮ್ಮ ಜೀವನದ ಬಗ್ಗೆ ಮಿತಿಮೀರಿದ ಆಕಾಂಕ್ಷೆಗಳನ್ನು ಇಟ್ಟುಕೊಳ್ಳಬೇಡಿರಿ. ಮಾನವನ ಜೀವನದಲ್ಲಿ ಅವನ ಆತ್ಮವು ಆಹಾರ ದೇಹಾದಿಗಳಿಗಿಂತ ಮಿಗಿಲಾದುದಲ್ಲವೆ?

"ಆಕಾಶದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿರುವ ಪಕ್ಷಿಸಂಕುಲವನ್ನು ನೋಡಿರಿ. ಅವುಗಳು ಬಿತ್ತುವುದಿಲ್ಲ, ಕೊಯ್ಯುವುದಿಲ್ಲ, ಕಣಜವನ್ನು

ಒಟ್ಟುಗೂಡಿಸುವುದಿಲ್ಲ, ಅಂತೆಯೇ ಹೂದೋಟದಲ್ಲಿ ಪ್ರಕೃತಿದತ್ತವಾಗಿ ಬೆಳೆದು ಸುವಾಸನೆಯನ್ನು ಬೀರುತ್ತಿರುವ ವಿವಿಧ ಪುಷ್ಪಗಳನ್ನು ವೀಕ್ಷಿಸಿರಿ. ಅವುಗಳು ದುಡಿಯುವುದಿಲ್ಲ, ಬಟ್ಟೆಬರೆಗಳನ್ನು ಹೆಣೆಯುವುದಿಲ್ಲ. ಆದರೂ ಆ ಪರಮ ಕರುಣಾಸಿಂಧುವು ಅವುಗಳನ್ನೆಲ್ಲ ಬೆಳೆಸಿ ಸಲಹುತ್ತಾನೆ. ಅಳಿದು ಹೋಗುವ ಈ ಅಲ್ಪ ವಸ್ತುಗಳಿಗಾಗಿ ಸರ್ವೇಶ್ವರನು ಇಷ್ಟು ದಕ್ಷತೆಯನ್ನು ವಹಿಸುವಾಗ ಅವನ ಸಾಕಾರ ಸ್ವರೂಪಾಂಶವಾದ ನಿಮಗಾಗಿ ಎಷ್ಟು ಮುತುವರ್ಜಿಯನ್ನು ವಹಿಸುತ್ತಾನೆಂಬುದನ್ನು ನೀವೇ ನೆನೆದುಕೊಳ್ಳಿ."

ನಮ್ಮ ನೆರೆಕರೆಯವರನ್ನು ನಾವು ಎಷ್ಟು ಮಮತೆಯಿಂದ ಕಾಣಬೇಕು ಎಂಬುದರ ಕುರಿತು ಮಾತನಾಡುತ್ತಾ ಯೇಸುವು ಇಂತೆಂದನು: "ಇತರರನ್ನು ಪರೀಕ್ಷಿಸಲು ಹೋಗಬೇಡಿರಿ; ಅಂತಾದರೆ ಇತರರು ನಿಮ್ಮನ್ನು ನ್ಯಾಯಕ್ಕೆ ಗುರಿಪಡಿಸಲಾರರು. ನಿಮ್ಮ ಕಣ್ಣಿನಲ್ಲಿರುವ ಒನಕೆಯನ್ನು ಮರೆತು ನಿಮ್ಮ ಬಂಧುಗಳ ಕಣ್ಣಿನಲ್ಲಿರುವ ಕಸವನ್ನು ಶೋಧಿಸಲು ಹೊರಡಬೇಡಿರಿ; ಇತರರು ನಿಮ್ಮನ್ನು ಯಾವ ರೀತಿಯಿಂದ ಕಾಣಬೇಕೆಂದು ತವಕಪಡುತ್ತೀರೋ ಅಂತೆಯೇ ಅವರನ್ನೂ ಕಾಣಿರಿ."

o o o o o

"ನೆರೆದಿರುವ ನಿಮ್ಮಲ್ಲಿ ಈ ಭಗಿನಿಯು ಮಾಡಿದ ಪಾಪಗಳನ್ನು ಮಾಡದವರು ಯಾರಾದರೂ ಇದ್ದರೆ ಅಂಥವರು ಇವಳ ಮೇಲೆ ತಮ್ಮ ಮೊದಲನೇ ಕಲ್ಲನ್ನು ಎಸೆಯಿರಿ."

—ಯೇಸು.

ಇಂದ್ರಿಯಸುಖಕ್ಕೆ ಬಲಿಬಿದ್ದು ದುಡ್ಡಿಗಾಗಿ ದೇಹವನ್ನು ಭ್ರಷ್ಟಾಚಾರಕ್ಕೆಳಸಿದ ಪತಿತೆಯನ್ನು ಕಂಡೊಡನೆ ಯೇಸುವಿನ ಅಂತರಂಗವು ವಿಪಂಚಿಯಂತೆ ಮಿಡಿಯುತಿತ್ತು, ಕಳುಣಾರಸವು ಕರುಳನ್ನು ಕೊರೆದು ಕಣ್ಣೀರನ್ನು ಕೋಡಿಗಟ್ಟಲೆಯಲ್ಲಿ ಹರಿಸುತಿತ್ತು. ಯೇಸುವಿನ ಜೀವನದಲ್ಲಿ ಅವನು ಎಲ್ಲಿಯಾದರೂ ಕಂಬನಿಯನ್ನು ಸುರಿಸಿದ್ದಿದ್ದರೆ ಅದು ಬೀದಿಗಿಳಿವ ವಾಸವನಿತೆಯರಿಗಾಗಿ. ಮಹಿಳೆಯರು ನಾಯಕಸಾನಿಗಳಾಗಲು ಸಮಾಜವೇ ಮುಖ್ಯ ಕಾರಣವೆಂಬುದನ್ನು ಅವನು ಚೆನ್ನಾಗಿ ತಿಳಿದಿದ್ದನು. ಆದಕಾರಣ ಅವರನ್ನು ಅವನು ಯಾವಾಗಲೂ ಕರುಣೆ ಮತ್ತು ಕ್ಷಮಾ ದೃಷ್ಟಿಯಿಂದ ಕಾಣುತ್ತಿದ್ದನು. ತದ್ರೀತಿಯಲ್ಲಿ, ತಾವು ದುರುಳರಾಗಿದ್ದೂ ಇತರರನ್ನು ಪಾಣ್ಬರೆಂದು ಹೀಯಾಳಿಸುವವರನ್ನು ಕಂಡರೆ ಅವನಿಂದ ಸಹಿಸಲಾ

ಗುತ್ತಿರಲಿಲ್ಲ. ಅವರಿಗಾಗಿ ಯೇಸುವಿನ ನುಂಗಲಾರದ ಕಹಿ ಗುಳಿಗೆಗಳು ಸದಾ ಸಿದ್ಧವಾಗಿರುತ್ತಿದ್ದುವು.

ಒಮ್ಮೆ ಯೇಸುವಿನ ಬಳಿಗೆ ಫರಿಜೇಯರು (ಕಪಟಿಗಳಾದ ಯೆಹೂದ್ಯರು) ಓರ್ವ ವಾರಾಂಗನೆಯನ್ನು ಎಳೆದುತಂದರು. ಅವಳನ್ನು ಮೋಸೆಯ ಕಾನೂನಿನ ಮೇರೆಗೆ ಕಲ್ಲಿನಿಂದ ಹೊಡೆದು ಕೊಲ್ಲಬೇಕೆಂದು ಕಟ್ಟಪ್ಪಣೆಯಾಗಿತ್ತು. ಅಪಾದನೆಗೆ ಗುರಿಯಾಗಿದ್ದ ಅವಳನ್ನು ಯೇಸುವಿನ ಮುಂದೆ ತಂದು ನಿಲ್ಲಿಸಲಾಯಿತು. ಅವಳ ಮುಖವು ಬಾಡಿತ್ತು. ಮೈಯೆಲ್ಲಾ ಧೂಳಿನಿಂದ ಕವಿದುಕೊಂಡಿತ್ತು. ಉಟ್ಟ ಬಟ್ಟೆಯು ಹರಿದಿತ್ತು. ಯೆಹೂದ್ಯರು ನರಭಕ್ಷಕರಂತೆ ಅವಳ ಮೈಯ ಮಾಂಸವನ್ನು ಹರಿದು ಚೂರು ಚೂರು ಮಾಡಿ ತಿನ್ನಲು ಸಿದ್ಧರಾಗಿ ನಿಂತಿದ್ದರು. ಪ್ರತಿಯೊಬ್ಬನೂ ಕೈಯಲ್ಲಿ ಒಂದೊಂದು ಕಲ್ಲನ್ನು ಹಿಡಿದುಕೊಂಡು ಅವಳ ಮೂಳೆಗಳನ್ನು ಪುಡಿ ಪುಡಿಯಾಗಿ ಮಾಡಲು ತವಕಪಡುತ್ತಿದ್ದನು. ಯೇಸುವಿನ ಬಳಿಯಲ್ಲಿ ನಿಂತಿದ್ದ ಆ ಅಬಲೆ ಅವನನ್ನು ಕಂಡು ತಲೆತಗ್ಗಿಸಿ ಗಳಗಳನೆ ಅತ್ತಳು. ಅವಳ ಕಣ್ಣುಗಳಿಂದ ನಯನಜಲವು ಧಾರೆಗಟ್ಟಿ ಹರಿಯಿತು. ಮಾನವ ಪುತ್ರ ಯೇಸುವಿನಿಂದ ಈ ಕರುಣಾಜನಕ ಸನ್ನಿವೇಶವನ್ನು ಕಂಡು ತಡೆಯಲಾಗಲಿಲ್ಲ. ಯೇಸುವು ತಾನು ನಿಂತಲ್ಲೇ ನೆಲದ ಮೇಲೆ ಉಂಗುಷ್ಠದಿಂದ ಏನೋ ಬರೆಯತೊಡಗಿದನು. ಫರಿಜೇಯರು ಅದನ್ನು ಓದಿದರು. ಅವರಿಗೆ ಸಾವಿರ ಚೇಳುಗಳು ಒಮ್ಮೆಲೆ ಕಡಿದಂತಾಯಿತು. ಅವರ ಮನಸ್ಸನ್ನು ಮೊದಲೇ ಅರಿತುಕೊಂಡಿದ್ದ ಯೇಸುವೆಂದನು: "ಇವಳು ಮಾಡಿದ ಪಾಪಗಳನ್ನು ನಿಮ್ಮಲ್ಲಿ ಯಾರಾದರೂ ಮಾಡದವರಿದ್ದರೆ ಅಂಥವರು ಇವಳ ಮೇಲೆ ತಮ್ಮ ಮೊದಲನೇ ಕಲ್ಲನ್ನೆಸೆಯಿರಿ." ತಮ್ಮ ಹೆಸರುಗಳೊಡನೆ ತಾವು ಮಾಡಿದ ಪಾಪಗಳನ್ನು ಬರೆದುದಲ್ಲದೆ ಜೊತೆಗೆ ತಮ್ಮನ್ನು ಹೀಯಾಳಿಸಿಯೂ ನುಡಿದ ಯೇಸುವನ್ನು ಕಂಡು ಅವರಿಂದ ಸಹಿಸಲಾಗಲಿಲ್ಲ. ಶೀಘ್ರವಾಗಿ ಅಲ್ಲಿಂದ ಕಾಲ್ಕಿತ್ತರು. ಆಗ ಯೇಸುವು ಅವಳ ಕಡೆಗೆ ತನ್ನ ಕೃಪಾಕಟಾಕ್ಷವನ್ನು ಬೀರಿ, "ಮಗಳೇ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ, ಇನ್ನುಮುಂದೆ ಪಾಪಮಾಡಬೇಡ, ಮನೆಯ ಕಡೆಗೆ ನಡೆ" ಎಂದನು. ಅವಳು ಅಲ್ಲಿಂದೆದ್ದು ಯೇಸುವಿನ ಕರುಣೆಯನ್ನು ಕೊಂಡಾಡುತ್ತಾ ತೆರಳಿದಳು.

ಅದೇ ಸಮಯಕ್ಕೆ ಸರಿಯಾಗಿ ಪಾಲೆಸ್ತಿನಿನಲ್ಲಿ ಮೇರಿಯೆಂಬೊಬ್ಬ ವೇಶ್ಯೆಯು ವಾಸಿಸುತಿದ್ದಳು. ಅವಳ ಹಾವಭಾವ, ರೂಪಲಾವಣ್ಯಗಳಿಗೆ ಸಮಗ್ರ ಪಾಲೆಸ್ತಿನ್ ದೇಶವೇ ಮನಸೋತಿತ್ತು, ಮೈಸೋತಿತ್ತು. ಬಿನ್ನಾಣಗಿತ್ತಿ ನಚ್ಚಣಿಯ ಮಧುಭರಿತ ಚುಂಬನಕ್ಕಾಗಿ ತಮ್ಮ ಧನಕನಕ ಗಳನ್ನೆಲ್ಲಾ ಅರ್ಪಿಸಲು ಸಿದ್ಧರಾಗಿದ್ದರು ಅಲ್ಲಿನ ಸಿರಿವಂತರು. ಅವಳ ಯೌವನದ ಕುಡಿನೋಟದ ಸಂಚಿಗಾಗಿ ಹೂವನ್ನರಸುವ ಭ್ರಮರಗಳಂತೆ ಬಂದು ಮುತ್ತುತಿದ್ದರು ಊರ ತರುಣರು. ಆ ವಿಲಾಸಿನಿಯ ಜೀವನ ವೆಲ್ಲವೂ ಯುವಕರ ದೇಹದಾಹವನ್ನು ತಣಿಸಲಿಕ್ಕೇನೆ ಮೀಸಲಾಗಿತ್ತು. ಪ್ರಣಯವಿದಗ್ಧೆಯಾದ ಅವಳು ಪುರುಷರನ್ನು ತೃಪ್ತಿಪಡಿಸುವುದರಲ್ಲೇ ನಿರತ ಳಾಗಿದ್ದು ತನ್ನ ಸಮಯವನ್ನೆಲ್ಲಾ ನಾಟ್ಯಗೃಹಗಳಲ್ಲಿ ಕಳೆಯುತಿದ್ದಳು. ಇಡೀ ಪಾಲೆಸ್ತಿನಿನ ಯುವಜನರನ್ನು ತನ್ನ ಕಾಮಜಾಲದಲ್ಲಿ ಸಿಲುಕಿಸಿ, ವಿಷಯಸುಖದ ಸುಧೆಯನ್ನು ಉಣಿಸುತಿದ್ದ ಅವಳಿಂದಾಗಿ ಯೆಹೂದ್ಯರ ನೈತಿಕತೆಯೆಲ್ಲಾ ಸೂರೆಯಾಗಿತ್ತು.

ಒಮ್ಮೆ ಯೇಸು ಅವಳ ವಿಲಾಸಗೃಹದ ಕರೆಯಲ್ಲೇ ಹಾಯಾಗಿ ಹಾದು ಹೋಗುವವನಿದ್ದನು. ನಡೆದು ನಡೆದು ತುಂಬ ದಣಿದಿದ್ದುದರಿಂದ ಅಲ್ಲೇ ಬಳಿಯಲ್ಲಿದ್ದ ಖರ್ಜೂರ ವೃಕ್ಷದ ಕೆಳಗೆ ತುಸು ವಿಶ್ರಮಿಸಿದನು. ಮೇರಿಯ ಚೇಟಿಯು ತರುಣ ಪ್ರಯಾಣಿಕನೋರ್ವನು ಖರ್ಜೂರ ವೃಕ್ಷದ ಕೆಳಗೆ ಆಶ್ರಯಪಡೆದಿದ್ದ ವಿಷಯವನ್ನು ತನ್ನ ಒಡತಿಗೆ ತಿಳಿಸಿದಳು. ತರುಣ ರೆಂದೊಡನೆ ಬಾಯಿಬಿಡುತಿದ್ದ ಮೇರಿಗೆ ಈ ಮಾತುಗಳನ್ನು ಕೇಳಿ ಸುಮ್ಮ ನಿರಲು ಮನ ಒಪ್ಪಲಿಲ್ಲ. ಅವನನ್ನು ಸಂದರ್ಶಿಸದ ಹೊರತು ಬೇರೆ ದಾರಿ ಕಾಣಲಿಲ್ಲ. ಯೇಸುವಿನ ಸುಂದರ ಸ್ವರೂಪವನ್ನು ಕಂಡು ಅವಳು ಅವ ನಿಗೆ ಮನಸೋತಳು. ಅವಳು ತನ್ನ ಪ್ರೇಮಮಯ ಜೀವನದಲ್ಲಿ ಎಷ್ಟೋ ಮಂದಿ ಯುವಕರನ್ನು ಕಂಡಿದ್ದಳು, ಅವರೊಡನೆ ಸೊಗದ ಸವಿಯನ್ನುಂಡಿ ದ್ದಳು. ಆದರೆ ಯೇಸುವಿನ ರೂಪದಂಥ ಮನಮೋಹಕ ರೂಪವನ್ನು ಅವಳು ಜೀವನದಲ್ಲೇ ತನ್ನ ಕಂಡಿರಲಿಲ್ಲ. ಅವನ ದಿವ್ಯರೂಪವು ಅವಳ ಕಣ್ಮನಗಳನ್ನು ಸೆರೆಹಿಡಿಯಿತು. ಅವತಾರ ಪುರುಷನಾಗಿದ್ದ ಯೇಸುವು ದೇದಿಪ್ಯಮಾನವಾದ ವ್ಯಕ್ತಿತ್ವದಿಂದ ಅವಳ ಹೃದಯವನ್ನು ಸಂಪೂರ್ಣ ವಾಗಿ ಗೆದ್ದಿದ್ದನು. ಯೇಸುವನ್ನು ಕಂಡ ಮೇರಿಯು ಅಂದಿನ ರಾತ್ರಿಯನ್ನು

ಅವಳ ವೈಭವಯುಕ್ತ ಮಹಲಿನಲ್ಲಿ ಕಳೆಯುವಂತೆ ಅವನನ್ನು ಒತ್ತಾಯ ಪಡಿಸಿದಳು. ಮಹಾತ್ಮ ಯೇಸುವು ಅವಳ ಅಪೇಕ್ಷೆಯನ್ನು ನಿರಾಕರಿಸಿ "ನಾನು ನಿನ್ನ ಮನೆಗೆ ಬಾರದಿದ್ದರೂ ಈಗಾಗಲೇ ನಿನ್ನ ಮನೆಯೊಳಗಿಲ್ಲವೇ?" ಎಂದನು. ಯೇಸುವಿನ ಈ ಅಮೃತವಾಣಿಯು ಮೇರಿಗೆ ಕರ್ಣರಸಾಯನ ವಾಯಿತು. ಅವಳ ಅನೀತಿಯುತ ಜೀವನಕ್ಕೆ ಅಣೆಕಟ್ಟಾಯಿತು. ಪವಿತ್ರ ಜೀವನವೆಂಬ ನವ ಅಧ್ಯಾಯಕ್ಕೆ ಗಾಯತ್ರಿ ಮಂತ್ರವಾಯಿತು. ಮೇರಿಯು ಸತ್ಯದ ಉಪಾಸನೆಗಾಗಿ ತನ್ನ ವಿಲಾಸಮಯ ಜೀವನವಿಡೀ ಬಲಿಯಿತ್ತು ಅಹಿಂಸಾ ಮೂರ್ತಿಯಾದ ಯೇಸುವಿನ ಪಟ್ಟಶಿಷ್ಯೆಯಾದಳು. ಯೇಸು ವಿಗೆ ಅಚ್ಚುಮೆಚ್ಚಿನವಳಾದಳು. ಪತಿತೆಯಾಗಿದ್ದವಳು ಪಾವನೆಯಾಗಿ ಪರಿಣಮಿಸಿದಳು. ಅಂದಿನಿಂದ ಅವಳನ್ನು ಮ್ಯಾಗ್ದಲಿನ್ ಎಂದು ಕರೆದರು. ಮ್ಯಾಗ್ದಲಿನ(ಪತಿತಪಾವನೆ)ಳು ಯೇಸುವನ್ನು ತಮ್ಮ ಪ್ರಯೋಜನಕ್ಕಾಗಿ ಪ್ರೀತಿಸುವ ಎಲ್ಲರಂತೆ ವರ್ತಿಸದೆ ತನ್ನ ಸರ್ವಸ್ವವೂ ಅವನೇ ಎಂಬ ಮಧುರ ಭಾವದಿಂದ ಅವನನ್ನು ಪ್ರೀತಿಸಿದಳು. ಅವಳಲ್ಲಿದ್ದ ಅಮೂಲ್ಯ ಸಂಪತ್ತೆಂ ಬುದು ಯೇಸುವೊಬ್ಬನೇ ಆಗಿದ್ದು, ಅವನ ಹೊರತಾಗಿ ಇನ್ನಾವುದೂ ಅವಳ ಬಳಿಯಲ್ಲಿರಲಿಲ್ಲ; ಅವಳಿಗೆ ಬೇಕಾಗಿರಲಿಲ್ಲ.

o o o o o

"ನಾಜರೆತದ ಯೇಸುವಿನ ಆತ್ಮವೇ ಒಂದು ಅತ್ಯುತ್ತಮ ಹಾಗೂ ಪುರಾತನ ಮಧುವಾಗಿದೆ." —ಕಾನಾನದ ವಧು ರಷ್ಕಾ.

ಮಹಾತ್ಮ ಯೇಸುವು ತನ್ನ ಧರ್ಮಬೋಧೆಯನ್ನು ಜನರಿಗೆ ಮಂದಟ್ಟುಪಡಿಸಲು ದೃಷ್ಟಾಂತ ಕಥೆಗಳನ್ನು ವಿವರಿಸಿ ಹೇಳುತಿದ್ದನು. ತಾತ್ವಿಕ ವಿಷಯಗಳನ್ನು ಜನರಲ್ಲಿ ಬಳಕೆಯಲ್ಲಿರುವ ಕತೆಗಳ ಮೂಲಕ ತಿಳಿಯ ಹೇಳುತಿದ್ದುದರಿಂದ ಪಂಡಿತ ಪಾಮರರೆನ್ನದೆ ಸರ್ವರೂ ಅವನ ಉಪದೇಶ ವನ್ನು ಅರ್ಥಮಾಡಿಕೊಳ್ಳುವಷ್ಟು ಶಕ್ತರಾಗಿದ್ದರು. ಯೇಸುವಿನ ದೃಷ್ಟಾಂತ ಕಥೆಗಳು ಇಂದಿಗೂ ಆಂಗ್ಲ ಸಾಹಿತ್ಯದ ಅಣಿ ಮುತ್ತುಗಳಾಗಿ ಪರಿಣಮಿ ಸಿವೆ. ಸಂಸ್ಕೃತದ ಸುಭಾಷಿತಗಳಂತೆ ಬೈಬಲಿನ ಅಣಿ ಮುತ್ತುಗಳಿಗೂ ತಮ್ಮದೇ ಆದ ಒಂದು ಸ್ಥಾನವಿದೆ. ಒಂದು ವೈಶಿಷ್ಟ್ಯವಿದೆ.

ವಿರಾಟಪುರುಷ ಪರಮಾತ್ಮನ ದಯಾಗುಣವನ್ನು ಯೇಸುವು ಎಷ್ಟು ವರ್ಣಿಸಿದರೂ ತಣಿಯುದವನಾಗಿದ್ದನು. ಕೃಪಾನಿಧಿ ಪರಮಾತ್ಮನನ್ನು

ಯೇಸುವು ತನ್ನ ದೃಷ್ಟಾಂತ ಕಥೆಗಳಲ್ಲಿ ಹಲವಾರು ಉತ್ತಮೋಪಮೆಗಳ ಮೂಲಕ ವಿವರಿಸಿದ್ದಾನೆ. ಹೊಲದಲ್ಲಿ ಬೀಜವನ್ನು ಬಿತ್ತಲಿಕ್ಕೆ ಹೊರಟ ರೈತನಿಗೂ, ತನ್ನ ಕುರಿಮಂದೆಗಾಗಿ ಸರ್ವಸ್ವವನ್ನೂ ಒಪ್ಪಿಸಲು ಸಿದ್ಧನಾಗಿರುವ ಒಳ್ಳೆಯ ಕುರುಬನಿಗೂ, ಮಗನು ದುಂದುಗಾರನಾದರೂ ಅವನನ್ನು ಕ್ಷಮಿಸಿ ಸಂತೈಸುವ ಕ್ಷಮಾಶೀಲ ತಂದೆಗೂ ಯೇಸುವು ಹೋಲಿಸಿದ್ದಾನೆ. ಇಂಥ ದೃಷ್ಟಾಂತ ಕಥೆಗಳಲ್ಲಿ ಒಂದೆರಡನ್ನಾದರೂ ಇಲ್ಲಿ ಹೇಳದಿದ್ದಲ್ಲಿ ಅಪ್ರಸ್ತುತವೆನ್ನಿಸೀತು.

ಯೇಸು ಹೇಳಿದ ಕಥೆಗಳು

ಯೇಸುವು ಒಮ್ಮೆ ಯೆರುಸಲೇಮಿನ ದೇವಾಲಯಕ್ಕೆ ಹೋದಾಗ ಸಹಸ್ರಾರು ಜನರು ಅವನ ವಚನಸುಧೆಯನ್ನು ಕೇಳಲು ಅವನನ್ನು ಸುತ್ತುಗಟ್ಟಿದರು. ಆಗ ಯೇಸುವು ಅವರಿಗೆ ಒಬ್ಬ ಒಳ್ಳೆಯ ಕುರುಬನ ದೃಷ್ಟಾಂತ ಕಥೆಯನ್ನು ವಿವರಿಸಿದನು. "ಒಂದೂರಿನಲ್ಲಿ ಒಬ್ಬ ಕುರುಬನಿದ್ದನು. ಅವನು ತನ್ನ ಕುರಿಗಳನ್ನು ತುಂಬಾ ಪ್ರೀತಿಯಿಂದ ಪಾಲಿಸುತಿದ್ದನು. ಆ ಕುರಿಗಳೇ ಅವನ ಜೀವನದ ಸರ್ವಸ್ವವಾಗಿದ್ದುವು. ಅವನು ಕೆಲಸಕ್ಕಿಟ್ಟ ಆಳಿನಂತೆ ತನ್ನ ಯೋಗಕ್ಷೇಮವನ್ನೇ ಪ್ರಧಾನವಾಗಿಟ್ಟು ಕೆಲಸಮಾಡುವವನಾಗಿರಲಿಲ್ಲ. ಕುರಿಗಳ ಯೋಗಕ್ಷೇಮವೆ ತನ್ನ ಯೋಗಕ್ಷೇಮವೆಂದು ತಿಳಿದಿದ್ದನು. ಒಮ್ಮೆ ಅವನ ಕುರಿಗಳಲ್ಲಿ ಒಂದು ಕುರಿಮರಿಯು ತಪ್ಪಿಹೋಯಿತು. ಆಗ ಆ ಒಳ್ಳೆಯ ಕುರುಬನು ತನ್ನ ಕುರಿಮಂದೆಯಲ್ಲಿನ ತೊಂಭತ್ತೊಂಭತ್ತು ಕುರಿಗಳನ್ನು ಅಟ್ಟಿಬಿಟ್ಟು ಆ ಒಂದು ಕುರಿಮರಿಯನ್ನು ಹುಡುಕತೊಡಗಿದನು. ಅದು ಸಿಕ್ಕುವ ವರೆಗೆ ಅವನು ತನ್ನ ನಿದ್ರಾಹಾರಗಳನ್ನು ತೊರೆದನು. ಕಟ್ಟಕಡೆಗೆ ಆ ಕುರಿಮರಿಯನ್ನು ಕಂಡುಹಿಡಿದು ತುಂಬಾ ಸಂತೋಷಗೊಂಡವನಾಗಿ, ಉಳಿದ ತೊಂಭತ್ತೊಂಭತ್ತು ಕುರಿಗಳೊಡನೆ ಅದನ್ನೂ ತನ್ನ ರೊಪ್ಪಕ್ಕೆ ಕರಕೊಂಡು ಬಂದನು. ಪರಮ ಕೃಪಾಸಿಂಧು ಪರಮೇಶ್ವರನು ಈ ಕುರುಬನಂತೆ ತೊಂಭತ್ತೊಂಭತ್ತು ಒಳ್ಳೆಯ ಜನರಿದ್ದರೂ, ದಾರಿತಪ್ಪಿ ನಡೆಯುವ ಒಬ್ಬ ಪಾಪಿಷ್ಠನಿಗಾಗಿ ತುಂಬಾ ಪರಿತಪಿಸುತ್ತಾನೆ."

ಪರಮಾತ್ಮನು ಪ್ರತಿಯೊಬ್ಬ ಮಾನವನಿಗೆ ಅವನವನ ಸತ್ಕರ್ಮಗಳಿಗನುಗುಣವಾಗಿ ತನ್ನ ಸಾನ್ನಿಧ್ಯವನ್ನು ದಯಪಾಲಿಸುತ್ತಾನೆ ಎಂಬುದರ

ಕುರಿತು ವಿವರಿಸುತ್ತಾ ಯೇಸುವೆಂದನು: "ಸ್ವರ್ಗಲೋಕವೆಂಬುದನ್ನು ಹೊಲಕ್ಕೆ ಸರಿಹೋಲಿಸಿದರೆ ಸರ್ವೇಶ್ವರನನ್ನು ಆ ಹೊಲದ ಯಜಮಾನನಿಗೆ ಹೋಲಿಸಬಹುದು. ಒಮ್ಮೆ ಒಬ್ಬ ಹೊಲದೊಡೆಯನು ತನ್ನ ಹೊಲದಲ್ಲಿ ದುಡಿಯಲು ಬೇಕಾದ ಆಳುಗಳನ್ನು ಹುಡುಕಲು ಹೊರಟನು. ದಾರಿಯಲ್ಲಿ ಕೆಲವು ನಿರುದ್ಯೋಗಿಗಳನ್ನು ಕಂಡು ಅವರನ್ನು ದಿನಕ್ಕೆ ಒಂದು ರೂಪಾಯಿ ಕೂಲಿಯ ಮೇರೆಗೆ ತನ್ನ ಹೊಲಕ್ಕೆ ಕಳುಹಿಸಿದನು. ಮುಂದುವರಿಯುತ್ತಾ ಹೋಗುವಾಗ ದಾರಿಯಲ್ಲಿ ಇನ್ನು ಕೆಲವರು ಅವನಿಗೆ ಸೋಮಾರಿಗಳಾಗಿ ಕುಳಿತದ್ದು ಕಂಡುಬಂತು. ಅವರನ್ನು ತನ್ನ ಹೊಲಕ್ಕೆ ಕಳುಹಿಸಿ ಅವರವರ ದುಡಿತಕ್ಕೆ ಸರಿಯಾಗಿ ಅವರಿಗೆ ಕೂಲಿಯನ್ನು ಕೊಡುವೆನೆಂದನು. ಅಲ್ಲಿಂದ ಮುಂದುವರಿಯುತ್ತಾ ಹೋಗುವಾಗ ದಾರಿಯಲ್ಲಿ ಸಂಜೆಯ ಇಳಿಹೊತ್ತಿಗೆ ಇನ್ನು ಕೆಲವರು ನೋಡಸಿಕ್ಕಿದರು. ಅವರಿಗೂ ಅವರ ದುಡಿತಕ್ಕೆ ಯೋಗ್ಯವಾದ ಕೂಲಿಯನ್ನೀಯುವೆನೆಂದು ತನ್ನ ಹೊಲಕ್ಕೆ ಕಳುಹಿಸಿಕೊಟ್ಟನು.

"ಪೃಥ್ವಿಯಲ್ಲಿ ಮಬ್ಬುಗವಿದು ಸಂಜೆಯಾದೊಡನೆ ಹೊಲದ ಕೆಲಸವು ಕೊನೆಗೊಳ್ಳಲು, ಯಜಮಾನನು ಎಲ್ಲಾ ಕೆಲಸಗಾರರನ್ನು ಕರೆದು ಕಡೆಯದಾಗಿ ಬಂದವರಿಗೆ ಒಂದೊಂದು ರೂಪಾಯಿ ಕೂಲಿಯನ್ನಿತ್ತನು. ಅನಂತರದಲ್ಲಿ ಹೊತ್ತಾರೆ ಬೇಗ ಬಂದು ಕೆಲಸಕ್ಕೆ ತೊಡಗಿದವರಿಗೂ ಒಂದೊಂದು ರೂಪಾಯಿ ಪ್ರಕಾರ ಕೂಲಿಯನ್ನೀಯಲು, ಅವರು, ಜೀಯಾ! ನಾವು ಬೆಳಗಿನಿಂದ ಬೈಗಿನ ವರೆಗೆ ದುಡಿದು ನಮಗೆ ಒಂದು ರೂಪಾಯಿ ಪ್ರಕಾರ ಕೂಲಿಯನ್ನಿತ್ತೆ, ಕೆಲಸ ಮುಗಿಯುವ ಎರಡು ಗಂಟೆ ಮುಂಚೆ ಬಂದ ಆ ಸೋಮಾರಿಗಳಿಗೂ ನಮ್ಮಷ್ಟೇ ಕೂಲಿಯನ್ನಿತ್ತುದು ಯಾವ ನ್ಯಾಯ?' ಎಂದರು. ಆಗ ಜಮೀನ್ದಾರನು, 'ಕಾರ್ಮಿಕರೇ ನಿಮ್ಮನ್ನು ಯಾವ ಕೂಲಿಯ ಮೇಲೆ ನೇಮಿಸಿದ್ದೆ?' ಆಗ ಅವರೆಂದರು: 'ಒಂದು ರೂಪಾಯಿಗಾಗಿ.' 'ನಿಮಗೆ ವಾಗ್ದಾನವಿತ್ತುದನ್ನು ನಿಮಗೆ ಇತ್ತೆನಲ್ಲವೇ? ಉಳಿದವರಿಗೆ ಹೆಚ್ಚು ಅಥವಾ ಕಡಿಮೆ ಕೊಡುವುದು ನನ್ನ ಇಷ್ಟ. ಅವರಿಗೆ ಹೆಚ್ಚು ಕೊಟ್ಟೆನೆಂದು ನಿಮಗೆ ಮತ್ಸರವೇಕೆ?" ಎಂದನು. ಯೇಸುವು ಅವನ ಈ ದೃಷ್ಟಾಂತದ ಮೂಲಕ ಗುಣೈಕಪಕ್ಷಪಾತಿಯಾದ ಸರ್ವಶಕ್ತನಿಗೆ ಶಿಷ್ಟರ ಮೇಲಿದ್ದಷ್ಟು ಮಮತೆಯು ದುಷ್ಟರ ಮೇಲೆಯೂ ಇರುವುದು, ಯಾಕೆಂದರೆ ಅವರೆಲ್ಲರೂ

ಅವನ ಮಕ್ಕಳು ಎಂಬುದನ್ನು ತೋರಿಸಿಕೊಟ್ಟುದಲ್ಲದೆ ಪಾಪಿಗಳಾಗಿರುವವರು ಎಂದೆಂದಿಗೂ ಧೈರ್ಯಗುಂದದೆ, ಪರಮ ದಯಾಘನನಾದ ಸರ್ವಾಂತರ್ಯಾಮಿಯ ಮೇಲೆ ಭರವಸೆಯನ್ನಿಟ್ಟು ತಮ್ಮ ತಪ್ಪುಗಳನ್ನು ತಿದ್ದಿಕೊಂಡಲ್ಲಿ, ಆ ಕೃಪಾಸಿಂಧುವು ತೆರೆದ ಕರಗಳಿಂದ ಅವರನ್ನು ಸ್ವಾಗತಿಸುವನು ಎಂಬುದನ್ನೂ ವಿಶದಪಡಿಸಿದನು.

ಒಮ್ಮೆ ಯೇಸುವು ಜೆರಿಕೊ ಪಟ್ಟಣದ ಮಾರ್ಗವಾಗಿ ಜೆಥೆನಿಯಾಕ್ಕೆ ಹೋಗುವವನಿದ್ದನು. ಅಲ್ಲಿ ಅವನ ಬಂಧುಬಳಗದವರಾದ ಮಾರ್ಥ, ಲಾಜರಸರು ವಾಸವಾಗಿದ್ದರು. ಅವರ ಮನೆಯನ್ನು ಸಮೀಪಿಸಿದೊಡನೆ ಮಾರ್ಥಳು ಅವನಿಗಾಗಿ ಭೋಜನವನ್ನು ಸಿದ್ಧಪಡಿಸಿದಳು. ಯೇಸುವು ಲಾಜರಸನೊಡನೆಯೂ ತನ್ನ ಶಿಷ್ಯರೊಡನೆಯೂ ಭೋಜನಕ್ಕೆ ಕುಳಿತನು. ಅಷ್ಟರಲ್ಲಿ ಅವನ ಕರುಣೆಯಿಂದ ಪಾವನೆಯಾಗಿದ್ದ ಮ್ಯಾಗ್ದಲೀನಳು ಅವನ ಕಾಲ ಮೇಲೆ ಘಮಘಮ ಪರಿಮಳಿಸುವ ಸುಗಂಧಪೂರಿತ ತೈಲವನ್ನು ಎರೆದಳು. ಇಡೀ ಭೋಜನಾಲಯವೆಲ್ಲಾ ಸುವಾಸನೆಯಿಂದ ತುಂಬಿ ಅಮರಾವತಿಯಂತೆ ಭಾಸವಾಯಿತು. ಆಗ ಯೇಸುವಿನ ಶಿಷ್ಯರಲ್ಲೊಬ್ಬನಾದ ಇಸ್ಕಾರಿಯಾತ್ ಜೂದನಿಗೆ, ಒಳ್ಳೇ ಬೆಲೆಬಾಳುವ ಸುಗಂಧತೈಲವನ್ನು ವೃಥಾ ಸುರಿದುದಕ್ಕೆ ಪಶ್ಚಾತ್ತಾಪವಾಯಿತು. ದುಡ್ಡಿನ ವ್ಯಾಮೋಹಕ್ಕೆ ಬಲಿಬಿದ್ದಿದ್ದ ಅವನು ಅಲ್ಲಿ ನೆರೆದವರೊಡನೆ "ಈ ಸುಗಂಧತೈಲವನ್ನು ಮಾರಿ ಬಂದ ಹಣವನ್ನು ಬಡವರಿಗೆ ಹಂಚುತಿದ್ದರೆ ಎಷ್ಟು ಪ್ರಯೋಜನವಾಗುತಿತ್ತು! ಇದು ವೃಥಾ ಹಾಳಾದಂತಾಗಲಿಲ್ಲವೆ?" ಎಂದನು. ಇಸ್ಕಾರಿಯತ್ ಜೂದನ ಮನಸ್ಸಿನಾಳವನ್ನು ಅರಿತಿದ್ದ ಯೇಸುವು ಅವನ ದುರಾಶೆಯನ್ನು ಬಯಲುಪಡಿಸಿ, ಪರಮಾತ್ಮನಿಗರ್ಪಿಸಿದ ಎಂಥ ಸಾಮಾನ್ಯ ವಸ್ತುಗಳೂ ಅವನ ದೃಷ್ಟಿಯಲ್ಲಿ ಅಗಣಿತವಾಗುತ್ತವೆ ಎಂಬುದನ್ನು ಅವನಿಗೆ ತಿಳಿಯಪಡಿಸಬೇಕೆಂಬ ಉದ್ದೇಶದಿಂದ ಹೀಗೆಂದನು: "ಶಿಷ್ಯನೇ ನೀನು ಈ ರೀತಿಯ ದುರುದ್ದೇಶವನ್ನು ಇವಳ ವಿಷಯದಲ್ಲಿ ಏಕೆ ಕಟ್ಟಿಕೊಳ್ಳುವೆ? ನಿರ್ಗತಿಕರು ನಿಮ್ಮೊಡನೆ ಯಾವಾಗಲೂ ಇರುವರು. ಆದರೆ ನಾನು ನಿಮ್ಮೊಡನೆ ಈ ಪಾರ್ಥಿವ ದೇಹದಲ್ಲಿ ಇನ್ನು ಹಲವು ಕಾಲ ಇರಲಾರೆ ಎಂಬುದನ್ನು ಮರೆತೆಯಾ?" ಎಂದನು.

ನಾಕವನ್ನು ಸೇರಲಿಚ್ಛಿಸುವವರು ನಿರ್ಮಲಾಂತಃಕರಣರಾಗಿದ್ದು ಅವರಲ್ಲಿ ಯಾವ ರೀತಿಯ ದುಷ್ಟ ಕಾಮನೆಗಳು ಮನೆಮಾಡಿಕೊಂಡಿರಕೂಡದು,

ಮೋಕ್ಷವನ್ನು ಬಯಸುವವರೆಲ್ಲಾ ಮನೋವಾಕ್ಕಾಯಗಳಲ್ಲಿ ಪವಿತ್ರರಾಗಿರುವವರಾಗಬೇಕು ಎಂಬುದನ್ನು ಯೇಸುವು ಸ್ವಾರಸ್ಯವಾದ ಒಂದು ದೃಷ್ಟಾಂತ ಕಥೆಯ ಮೂಲಕ ವಿವರಿಸಿದನು.

"ಒಬ್ಬ ರಾಜನಿಗೆ ತನ್ನ ಮಗ ಯುವರಾಜನ ಮದುವೆಯನ್ನು ಜರಗಿಸಬೇಕಾಗಿ ಬಂತು. ತನ್ನ ಸತ್ಪುತ್ರನ ಮದುವೆಗೆ ನೆರೆಕರೆಯ ರಾಜಕುಮಾರರನ್ನೂ ಊರಿನ ಆಢ್ಯಮಹನೀಯರನ್ನೂ ಆಮಂತ್ರಿಸಿದನು. ಆದರೆ ಅವರು ಹಲವಾರು ತರದ ನೆವನಗಳನ್ನು ಹೇಳಿ ಮದುವೆಗೆ ಬಾರದಾದರು. ಉಳಿದವರು ಮದುವೆಗೆ ಬರಲಿಲ್ಲ, ಮಾತ್ರವಲ್ಲದೆ ಆಮಂತ್ರಿಸಹೋದ ಸೇವಕರನ್ನೇ ಹಿಡಿದು ಕೊಂದರು. ರಾಜನಿಗೆ ಈ ವರ್ತಮಾನವು ತಿಳಿಯಲು, ಅವನು ತನ್ನ ಸೇವಕರನ್ನು ಕರೆದು 'ಇಷ್ಟರ ವರೆಗೆ ಆಮಂತ್ರಿಸಿದವರು ಯೋಗ್ಯರಲ್ಲವಾದ ಕಾರಣ ಇನ್ನು ಮುಂದೆ ನೀವುಗೆ ಮಾರ್ಗದಲ್ಲಿ ಸಿಕ್ಕುವ ದಲಿತರನ್ನೆಲ್ಲಾ ಮದುವೆಗೆ ಕರೆದು ತನ್ನಿ' ಎಂದು ಆಜ್ಞೆಯಿತ್ತನು.

"ರಾಜನ ಅಪ್ಪಣೆಯ ಮೇರೆಗೆ ಅವನ ಸೇವಕರೆಲ್ಲಾ ಬೀದಿ-ಬೀದಿಗಳಲ್ಲಿ ಸಂಚರಿಸಿ ಸಿಕ್ಕಿಸಿಕ್ಕಿದವರನ್ನು ಮದುವೆ ಮಂಟಪಕ್ಕೆ ಕರೆತಂದರು. ಭೋಜನಕ್ಕೆ ಬಂದಿದ್ದ ಅತಿಥಿಗಳ ಪರಿಚಯವನ್ನು ಮಾಡಲು ರಾಜನು ಅವರ ಬಳಿ ಬಂದು ನೋಡುವಲ್ಲಿ, ಅವರ ಪೈಕಿ ಅರ್ಧ ನಗ್ನನಾಗಿ ಕುಳಿತುಕೊಂಡಿದ್ದ ಒಬ್ಬನನ್ನು ಕಂಡನು. ಅವನ ಮೈಮೇಲೆ ಇದ್ದ ಕೊಳಕು ಬಟ್ಟೆಯೆಲ್ಲಾ ಹರಿದುಹೋಗಿತ್ತು. ಮದುವೆ ಮಂಟಪಕ್ಕೆ ಅಯೋಗ್ಯವಾದ ಉಡುಪನ್ನು ಧರಿಸಿದ ಅತಿಥಿಯನ್ನುದ್ದೇಶಿಸಿ, ಕ್ರೋಧಭರಿತನಾದ ರಾಜನು,'ಅತಿಥಿಯೇ, ಇಂಥ ಅಯೋಗ್ಯವಾದ ಉಡುಪನ್ನು ಧರಿಸಿ ಮದುವೆ ಮಂಟಪವನ್ನು ಏಕೆ ಪ್ರವೇಶಿಸಿದೆ?' ಎಂದನು. ಅದಕ್ಕೆ ಆ ಅತಿಥಿಯು ಸುಮ್ಮನಿರಲು, ರಾಜನು ತನ್ನ ಸೇವಕರನ್ನು ಕರೆದು,'ಈ ನೀಚನನ್ನು ಹೆಡಮುರಿಗೆ ಕಟ್ಟಿ ಅರಮನೆಯ ದ್ವಾರದ ಹೊರಗೆ ತಳ್ಳಿರಿ; ಈ ಮದುವೆಗೆ ಹಲವರನ್ನು ನಾನು ಆಮಂತ್ರಿಸಿದರೂ, ಅದರಲ್ಲಿ ಕೆಲವರು ಮಾತ್ರ ಸಮಾರಂಭದಲ್ಲಿ ಸನುಭಾಗಿಗಳಾಗಲು ಅರ್ಹರು' ಎಂದನು.

ಯೇಸುವಿನ ಮಾತುಗಳು ಅಲ್ಲಿದ್ದ ಯೆಹೂದ್ಯರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದುವು. ತಮ್ಮ ದುಷ್ಕೃತ್ಯಗಳನ್ನು ದೃಷ್ಟಾಂತ ಕಥೆಗಳ

ಮೂಲಕ ಸಿಕ್ಕಿಸಿಕ್ಕಿದಲ್ಲಿ ಖಂಡಿಸುತಿದ್ದ ಯೇಸುವನ್ನು, ಘಟಸರ್ಪದಂತೆ ಅಂಜುತಿದ್ದ ಯೆಹೂದ್ಯರು ಅವನನ್ನು ಸಿಕ್ಕಿಸಿಹಾಕಬೇಕೆಂಬ ನೆವದಿಂದ, ಅವನೊಡನೆ "ಸ್ವಾಮಿಯೇ, ನಾವು ಸೀಸರನಿಗೆ ಕಪ್ಪಕಾಣಿಕೆಗಳನ್ನೀಯು ವುದು ಸರಿಯೇ?" ಎಂದರು. ಅದಕ್ಕೆ ಯೇಸುವು "ಕಪಟಿಗಳೇ, ನೀವು ನನ್ನನ್ನು ಈ ತೆರದಲ್ಲಿ ವಂಚಿಸಬೇಕೆಂದು ಏಕೆ ಯೋಚಿಸುತ್ತಿರುವಿರಿ? ನೀವು ಕಪ್ಪಕಾಣಿಕೆಗಳನ್ನೀವ ಒಂದು ನಾಣ್ಯವನ್ನು ನನಗೆ ತೋರಿಸಿ" ಎಂದನು. ಯೆಹೂದ್ಯರು ಸೀಸರನ ಮುಖಮುದ್ರೆಯಿರುವ ಒಂದು ನಾಣ್ಯವನ್ನು ಅವನ ಕೈಗಿತ್ತರು. ಯೇಸುವು ನಾಣ್ಯವನ್ನು ಕೈಯಲ್ಲಿ ಹಿಡಿದುಕೊಂಡು ನೆರೆದಿದ್ದ ಯೆಹೂದ್ಯರೊಡನೆ "ಇದು ಯಾರ ಮುಖಮುದ್ರೆ?" ಎಂದನು. ಅವರು "ಸೀಸರನದೆಂ"ದರು. ಆಗ ಯೇಸುವು "ವಂಚಕರೇ, ಸೀಸರನಿಗೆ ಒಪ್ಪಿಸು ವುದನ್ನು ಸೀಸರನಿಗೀಯಿರಿ; ಪರಮಾತ್ಮನಿಗೀಯಬೇಕಾದುದನ್ನು ಅವನ ಪಾಲಿಗೊಪ್ಪಿಸಿರಿ" ಎಂದನು. ಯೇಸುವನ್ನು ಸಿಕ್ಕಿಸಿಹಾಕಬೇಕೆಂದು ಹೊರಟ ಯೆಹೂದ್ಯರು ತಮ್ಮ ಕೃತ್ಯಗಳಿಗೆ ತಾವೇ ನಾಚಿ ಮನಸ್ಸಿನಲ್ಲಿ ಮತ್ಸರದಿಂದ ಕುದಿಯುತ್ತಾ ತಮ್ಮ ತಮ್ಮ ದಾರಿ ಹಿಡಿದು ನಡೆದರು.

ದಾಸ್ಯಮತಿ ಸೈತಾನ; ನಿರಂಕುಶಮತಿಯೆ ಯೇಸು.

(ಕುವೆಂಪು)

ಯೇಸುವನ್ನು ಸೆರೆ ಹಿಡಿದು, ಅವನ ಪ್ರಾಣ ಹಿಂಡಲು ಕಾತರರಾಗಿದ್ದ ಯೆಹೂದ್ಯರು ಹಗಲಿರುಳೂ ಕೊಳ್ಳೆಗಾಗಿ ಕಾಯುವ ಸಿಂಹದಂತೆ ಅವನ ಮೇಲೆ ಹೊಂಚುಹಾಕಿಕೊಂಡಿದ್ದರು. ಹಲವಾರು ತರದ ಹಂಚಿಕೆಗಳನ್ನೂ ಚಕ್ರವ್ಯೂಹ, ಮಕರವ್ಯೂಹ ಕೋಟೆಗಳನ್ನೂ ರಚಿಸಿ ವಿಫಲರಾದ ಅವರು ಯೇಸುವಿನ ಶಿಷ್ಯರಲ್ಲೊಬ್ಬನಾದ ಇಸ್ಕಾರಿಯುತ್ ಜೂದನ ಸಹಾಯವನ್ನು ಪಡೆದರು. ಯೇಸುವಿನ ಅಮೃತೋಕ್ತಿಯನ್ನಾಲಿಸಿ ಸಹಸ್ರಾರು ಜನರು ತಮ್ಮ ಜೀವನಗಳನ್ನು ಪಾವನಮಾಡಿಕೊಂಡಿದ್ದರೂ, ಜೂದನು ದಿನೇ ದಿನೇ ನಾಶಪಥದ ಕಡೆಗೆ ಸಾಗುತಿದ್ದನು—ಹೊರತು ಪುನೀತನಾಗಲಿಲ್ಲ. ಅವನಿಗೆ ಹಿಡಿದ ಧನದ ವ್ಯಾಮೋಹವು ಯೇಸುವಿನ ಬೋಧನೆಗಳಿಗೆ ಕಿವಿಗೊಡದಂತೆ ಅವನನ್ನು ಪ್ರೇರೇಪಿಸುತಿತ್ತು. ಕ್ಲೈಬ್ಯಕ್ಕೆ ಗುರಿಯಾದ ಅವನ ಜೀವನವು

ಅವನ ಅಂತರಂಗದ ಜ್ಯೋತಿಯನ್ನು ನಂದಿಸಿತ್ತು. ಹೃದಯಾಂತರಾಳದಲ್ಲಿ ಕವಿದಿದ್ದ ಮಬ್ಬು ತನ್ನ ಸ್ವಾಮಿಯನ್ನೇ ಯೆಹೂದ್ಯರಿಗೆ ಮಾರುವಂತೆ ಮಾಡಿತಲ್ಲದೆ, ಅಂತ್ಯದಲ್ಲಿ ಅವನ ಜೀವನವನ್ನೇ ಆಹುತಿಗೊಂಡಿತು.

ಯೇಸುವಿನ ರಕ್ತಕ್ಕಾಗಿ ಜಿಗಳೆಗಳಂತೆ ಹಾತೊರೆಯುತ್ತಿದ್ದ ಯೆಹೂದ್ಯರು ಅವನನ್ನು ಹಿಡಿದು ತಮ್ಮ ನ್ಯಾಯಾಧೀಶರ ಸಮಕ್ಷಮದಲ್ಲಿ ಹಾಜರುಪಡಿಸಿದರು. ಅವನ ಮೇಲೆ ಸಾವಿರಾರು ತರದ ಆಪಾದನೆಗಳನ್ನು ಹೊರಿಸಲಾಯಿತು. ರೋಮನ್ ಚಕ್ರವರ್ತಿಯ ಮೇಲೆ ಬಂಡಾಯವನ್ನೆಬ್ಬಿಸಿ ಅವನಿಗೆ ಸಲ್ಲಿಸುತ್ತಿರುವ ಕರತೆರಿಗೆಗಳನ್ನು ನಿಲ್ಲಿಸುವ ದರೋಡೆಗಾರನೆಂಬ ಬಿರುದನ್ನೂ ಅವನಿಗೆ ದಯಪಾಲಿಸಲಾಯಿತು. "ಯುವಜನರ ಮನಸ್ಸನ್ನು ವಿಷಪೂರಿತವನ್ನಾಗಿಸುವವ"ನೆಂಬ ಆರೋಪಕ್ಕೂ ಅವನನ್ನು ಗುರಿಪಡಿಸಲಾಯಿತು. ಆದರೆ ಧರ್ಮದ ಉತ್ಥಾನಕ್ಕಾಗಿ ಅವತರಿಸಿದ ಯೇಸುವು, ಇಂಥ ಗೊಡ್ಡು ಬೆದರಿಕೆಗಳಿಗೆ ಮಣಿಯಲಿಲ್ಲ. ಅಂದು ಸಾಕ್ರೆಟಿಸನು ವಿಷದ ಬಟ್ಟಲನ್ನು ಕುಡಿದು ಪ್ರಾಣ ನೀಗಿದಂತೆ, ಇಂದು ಈ ಸಾಕ್ರೆಟಿಸನು ತನ್ನ ದೇಹವನ್ನೇ ಶಿಲುಬೆಗೆ ಜಡಿಸಿಕೊಂಡನು. ತನ್ನ ಪ್ರಾಣವನ್ನು ಸತ್ಯ, ನೀತಿ, ಅಹಿಂಸೆಗಳಿಗಾಗಿ ಬಲಿತೆತ್ತು, ಭೌತಿಕವಾಗಿ ಅಳಿದರೂ, ಮಾಯಾತೀತನಾಗಿ ಉಳಿದು ಮೃತ್ಯುಂಜಯನಾದನು. ಅವನ ಕಾರುಣ್ಯಕುಂಡವೆಂಬ ಹೃದಯದಿಂದ ಹೊರಹೊರಟ ಅಮೃತೋಕ್ತಿಗಳು ಇಂದಿಗೂ ಸಮಸ್ತ ಮಾನವಕುಲಕ್ಕೆ ಶಾಂತಿಯ ಸಾಗರವಾಗಿವೆ, ಸತ್ಯದ ಆಗರವಾಗಿವೆ, ಜ್ಞಾನದ ಓಗರವಾಗಿವೆ.

Edited, Printed & Published by K. V. Shenoy
at the Prabhat Printers, Ltd., Mangalore.